**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.**

| | |
|---|---|
| ಓ.ಎಸ್. ನಂ | **14/2017** |
| ಪಿ.ಡಬ್ಲ್ಯೂ | **01** |
| ದಿನಾಂಕ | **03.01.2024** |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ ಸಿ. ಎಮ್ ಪ್ರತಿವಾದಿಯ ಪರ ವಕೀಲರಿಂದ.**

ಈಗ ನಾನು ಒಂದು ಛಾಯಾಚಿತ್ರವನ್ನು ನೋಡುತ್ತಿದ್ದು, ಸದರಿ ಛಾಯಾಚಿತ್ರದಲ್ಲಿ ನಮ್ಮ ಆಸ್ತಿಯು ಕಾಣಸಿಗುತ್ತದೆ ಎಂದರೆ ಸರಿ. ಸದರಿ ಆಸ್ತಿಯ ದಕ್ಷಿಣ ದಿಕ್ಕಿಗೆ ಟಾರ್ ರಸ್ತೆ ಇದೆ ಎಂದರೆ ಸರಿ. ಸಾಕ್ಷಿಯು ಸದರಿ ಛಾಯಾಚಿತ್ರವನ್ನು ಒಪ್ಪಿದ್ದರಿಂದ ಅದನ್ನು ನಿಡಿ1 ಎಂದು ನಿಶಾನೀಕರಿಸಲಾಯಿತು. ಸದರಿ ರಸ್ತೆಯ ಪಶ್ಚಿಮ ದಿಕ್ಕಿಗೆ ಶಾಲೆ ಇದೆ ಎಂದರೆ ಸರಿ. ಸಾಕ್ಷಿಯು ಸದರಿ ಛಾಯಾಚಿತ್ರವನ್ನು ಒಪ್ಪಿದ್ದರಿಂದ ಅದನ್ನು ನಿಡಿ 2 ಎಂದು ನಿಶಾನೀಕರಿಸಲಾಯಿತು. ಅಂತೆಯೇ ಸದರಿ ರಸ್ತೆಯ ಪಶ್ಚಿಮ ದಿಕ್ಕಿಗೆ ಮುನಿಯಪ್ಪ ಮತ್ತು ವೆಂಕಟಪ್ಪರವರ ಆಸ್ತಿ ಇದೆ ಎಂದರೆ ಸರಿಯಲ್ಲ.

ಸರ್ವೆ ನಂ.14 ರಲ್ಲಿ ಪ್ರತಿವಾದಿಯ ತಂದೆಯಾದ ಲೇ. ಚಿಕ್ಕಮುನಿಸ್ವಾಮಿಯವರು 2007 ರಲ್ಲಿ ಎರಡು ಅಂತಸ್ತಿನ ಆರ್.ಸಿ.ಸಿ. ಮನೆ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಅದಕ್ಕೆ ಸಂಬಂಧಿಸಿದ ಛಾಯಾಚಿತ್ರವನ್ನು ಒಪ್ಪಿದ್ದರಿಂದ ಅದನ್ನು ನಿಡಿ 3 ಎಂದು

ನಿಶಾನೀಕರಿಸಲಾಯಿತು. ಸದರಿ ಮನೆಯಲ್ಲಿ ಪ್ರತಿವಾದಿಗಳು ಪ್ರಸ್ತುತ ವಾಸವಾಗಿದ್ದಾರೆ ಎಂದರೆ ಸರಿ. ಸದರಿ ಮನೆಗೆ ಸಂಬಂಧಿಸಿದಂತೆ ಸದರಿ ಮನೆಯ ಸುತ್ತಲೂ ಕಂಪೌಂಡ ಇದೆ ಎಂದರೆ ಸರಿ. ಮನೆಯ ಸುತ್ತಲೂ ಖಾಲಿ ಜಾಗ ಇದೆ ಎಂದರೆ ಸಾಕ್ಷಿಯು ಅದು ನಮ್ಮ ಬಾಬ್ತು ಖಾಲಿ ಜಾಗ ಎಂದು ನುಡಿದಿರುತ್ತಾರೆ. ಮನೆಯ ಸುತ್ತಲೂ ಪ್ರತಿವಾದಿಯು ಅವರ ಬಾಬ್ತು ಜೆ.ಸಿ.ಬಿ ಮತ್ತು ಟ್ರ್ಯಾಕ್ಟರ್ ನಿಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ಪ್ರಕರಣಕ್ಕೋಸ್ಕರ ನಿಡಿ 3 ನ್ನು ಸೃಷ್ಟಿಸಿದ್ದಾರೆ ಎಂದು ನುಡಿದಿರುತ್ತಾರೆ. ಪ್ರತಿವಾದಿಯ ಮನೆಯ ಮುಂದೆ ಇರುವ ಖಾಲಿ ಜಾಗದಲ್ಲಿ ಅವರ ತಂದೆ 15 ವರ್ಷಗಳ ಹಿಂದೆಯೇ ಗಿಡ ನೆಟ್ಟಿದ್ದು, ಅವು ಈಗ ಮರಗಳಾಗಿವೆ ಎಂದರೆ ಸರಿಯಲ್ಲ. ನಿಡಿ 3 ರ ಅನ್ವಯ ಲಿಂಗಾಪುರ-ಆನೇಕಲ್ ಮುಖ್ಯ ರಸ್ತೆಯಿಂದ ಪ್ರತಿವಾದಿಯ ಮನೆಗೆ ಹೋಗಲು ಮಣ್ಣಿನ ರಸ್ತೆ ಇದೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ದಾವಾ ಅನುಸೂಚಿ ಸ್ವತ್ತಿಗೆ 2016-17 ರಲ್ಲಿ ಅತಿಕ್ರಮ ಪ್ರವೇಶ ಮಾಡಿರುತ್ತಾರೆ. ನಿರ್ದಿಷ್ಟವಾದ ದಿನಾಂಕ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು, ಅತಿಕ್ರಮ ಪ್ರವೇಶ ಮಾಡಿಲ್ಲ, ಆದರೆ ಮಾಡಲು ಪ್ರಯತ್ನಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳು ನಮ್ಮ ಆಸ್ತಿಗೆ ಅತಿಕ್ರಮ ಪ್ರವೇಶ ಮಾಡಿಲ್ಲ ಎಂದರೆ ಸರಿಯಲ್ಲ.

ವಾದಪತ್ರದಲ್ಲಿರುವ ಅಂಶಗಳನ್ನು ನನ್ನ ತಂದೆಯವರೇ ಹೇಳಿ ಬರೆಯಿಸಿದ್ದಾರೆ. ದಾವಾ "ಬಿ" ಅನುಸೂಚಿ ಸ್ವತ್ತು 5 ಗುಂಟೆ ಇದೆ ಎಂದು ನಿರೂಪಿಸಲು ನಾನು ಯಾವುದೇ ದಾಖಲಾತಿಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. “ಬಿ" ಅನುಸೂಚಿ ಸ್ವತ್ತಿನಲ್ಲಿ 5 ಗುಂಟೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ವಾದಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನನ್ನ ತಂದೆಯವರು ಹೇಳಿ ನಮೂದಿಸಿರುತ್ತಾರೆ. ಸದರಿ ಪತ್ರದ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳು ರಸ್ತೆಯ ಪೂರ್ವ ದಿಕ್ಕಿನಲ್ಲಿ ಮಾತ್ರವೇ ಇವೆ, ಪಶ್ಚಿಮ ದಿಕ್ಕಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮ್ಮ ಆಸ್ತಿಗೆ ಅತಿಕ್ರಮ ಪ್ರವೇಶ ಮಾಡಿಲ್ಲ ಎಂದರೆ ಸರಿಯಲ್ಲ. ವಿನಾ ಕಾರಣ ಅವರ ವಿರುದ್ದ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ರಸ್ತೆಯನ್ನು ಉಪಯೋಗಿಸಬಾರದು ಎಂಬ ಉದ್ದೇಶದಿಂದ ಅವರ ವಿರುದ್ದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ "ಬಿ" ಅನುಸೂಚಿ ಸ್ವತ್ತಿನಲ್ಲಿ ಪ್ರಸ್ತುತವೂ ಸಹ ಪ್ರತಿವಾದಿಗಳೇ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ**
**ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.**